

## ಔಷಧೀಯ ಸಸ್ಯ

# ಕರಿಲಕ್ಕಿ

★ ಚಿತ್ರ- ಬರಹ: ಬಿ.ಲಕ್ಷ್ಮೀಕಾಂತ ಸಾ



'ಮಹಾಭಾರತ'ದಲ್ಲಿ ಭೀಮ-ದುರ್ಯೋಧನರ ಗದಾಯುದ್ಧ ಪ್ರಸಂಗ ಅತ್ಯಂತ ಜನಪ್ರಿಯ. ಅಲ್ಲೊಂದು ಪ್ರಸಂಗ ಬರುತ್ತದೆ: ಭೀಮನಿಂದ ತೊಡೆ ಮುರಿದುಕೊಂಡು ಸಾಯುವ ಮೊದಲು, ಗಾಂಧಾರಿಯ ತಪಶ್ಶಕ್ತಿಯ ಫಲವಾಗಿ ತೊಡೆ ಭಾಗ ಹೊರತುಪಡಿಸಿ ದೇಹವನ್ನೆಲ್ಲಾ ವಜ್ರವಾಗಿಸಿಕೊಂಡಿದ್ದ ದುರ್ಯೋಧನ, ತನ್ನ ಗದೆಯ ಪ್ರಹಾರದ ಮೂಲಕ ಭೀಮನನ್ನು ತೀವ್ರವಾಗಿ ಗಾಯಗೊಳಿಸುತ್ತಾನೆ. ಈ ಸಂದರ್ಭದಲ್ಲಿ ಸಹೋದರ ನಕುಲ ಹಿಡಿ ಮಣ್ಣನ್ನೇ ಅಭಿಮಂತ್ರಿಸಿ ಭೀಮನ ಗಾಯಗಳನ್ನು ಉಪಶಮನಗೊಳಿಸಲು ಯತ್ನಿಸುತ್ತಾನೆ. 'ದುರ್ಯೋಧನನ ಸಾವಿನ ನಂತರವೇ ನನ್ನ ಗಾಯಗಳ ಕುರಿತು ಚಿಂತಿಸುತ್ತೇನೆ' ಎಂದು ಭೀಮ ತಡೆಯುತ್ತಾನೆ. ನಕುಲ ತಾನು ಅಭಿಮಂತ್ರಿಸಿದ್ದ ಮಣ್ಣನ್ನು ಸರೋವರದ ದಂಡೆಯ ಮೇಲೆ ಚೆಲ್ಲುತ್ತಾನೆ. ಆಶ್ಚರ್ಯವೆಂಬಂತೆ ಅಲ್ಲಿಯೇ ಸಸಿಯೊಂದು ಮೊಳೆಯುತ್ತದೆ. ನಕುಲ 'ಕಬ್ಬಿಣದ ಆಯುಧಗಳಿಂದ ಆಗುವ ಗಾಯಗಳ ಉಪಶಮನಕ್ಕೆ ಈ ಸಸ್ಯ ಬಳಕೆಯಾಗಲಿ' ಎಂದು ಹರಸುತ್ತಾನೆ.

-ಹೀಗೆ ದ್ವಾಪರಯುಗದಲ್ಲಿ ನಕುಲ ಹರಸಿದ ಎನ್ನಲಾದ ಸಸ್ಯ ಪ್ರಬೇಧವೇ ಇಂದು ಕರಿಲಕ್ಕಿ ಎಂದು ಜನಜನಿತವಾಗಿದೆ. ಸಸ್ಯಶಾಸ್ತ್ರೀಯವಾಗಿ ವೈಟೆಕ್ಸ ನಿಗುಂಡ ಎಂದು ಹೆಸರಿರುವ ಕರಿಲಕ್ಕಿ, ವರ್ಬಿನೇಸಿ ಕುಟುಂಬಕ್ಕೆ ಸೇರಿದೆ.

ಇದು ಪೊದೆಯಂತೆ ಬೆಳೆಯುವ ಗಿಡವಾದರೂ, ಫಲವತ್ತಾದ ಭೂಮಿಯಲ್ಲಿ ಹೆಮ್ಮರವಾಗಿ ಬೆಳೆದಿರುವ ನಿದರ್ಶನಗಳಿವೆ. ಬೇರು, ಕಾಂಡ, ಹೂ ಮತ್ತು ಎಲೆ ಹಸಿರು ಮಿಶ್ರಿತ ನೇರಳೆ ಬಣ್ಣ ಹೊಂದಿರುವುದಲ್ಲದೆ, ಗಿಡದ ಪ್ರತಿ ಭಾಗವೂ ಔಷಧದ ಆಗರವಾಗಿದೆ.

ತೆಂಗಿನಕಾಯಿಯ ಎಳೆನೀರಿನಲ್ಲಿ ತೇಯ್ದ ಬೇರು ಮಧುಮೇಹ ನಿಯಂತ್ರಿಸುವಂತೆಯೇ, ಒಣಗಿದ ಬೇರಿನ ಪುಡಿಯನ್ನು ಎಳ್ಳೆಣ್ಣೆಯಲ್ಲಿ ಸೇರಿಸಿ ನಿರಂತರವಾಗಿ ಸೇವಿಸಿದರೆ ಕುಷ್ಠರೋಗ ಶಮನಕ್ಕೆ ನೆರವಾಗುತ್ತದೆ. ಇದೇ ಬೇರಿನ ಚೂರ್ಣ ಮಜ್ಜಿಗೆಯೊಡನೆ ಸೇವಿಸಿದರೆ ಮೂತ್ರಕೋಶದ ಕಲ್ಲುಗಳನ್ನು ಕರಗಿಸಬಹುದು ಎನ್ನಲಾಗುತ್ತಿದೆ.

ವೃಷಣದ ಊತ ಕಡಿಮೆಗೊಳಿಸಲು ಲಕ್ಕಿ ಸೊಪ್ಪನ್ನು ಆಡಿನ ಹಾಲಿನೊಡನೆ ಸೇವಿಸುತ್ತಾರೆ. ಇದೇ ಸೊಪ್ಪನ್ನು ಅರೆದು ತೊಡೆವಾಳೆ(ಕುರು), ಅಂಗಾಲು ಉರಿ ಹಾಗೂ ಆಯುಧಗಳಿಂದ ಆಗುವ ಗಾಯಕ್ಕೆ ಹಚ್ಚಿಕೊಂಡರೆ ಪರಿಣಾಮಕಾರಿ. ಇದನ್ನೇ ತುಪ್ಪ ಅಥವಾ ಜೇನುತುಪ್ಪದೊಡನೆ ಸೇವಿಸಿದರೆ ವೀರ್ಯವೃದ್ಧಿಗೆ ಸಹಾಯಕ.

ಇನ್ನೂ ಅನೇಕ ಔಷಧದ ಗುಣಗಳಿರುವ ಕರಿಲಕ್ಕಿ ಅಳಿವಿನ ಅಂಚಿನಲ್ಲಿದೆ. ಇದಕ್ಕೆ ಎರಡು ಮುಖ್ಯ ಕಾರಣಗಳಿವೆ: ವಾಮಾಚಾರದಲ್ಲಿ ಈ ಸಸ್ಯ ಬಳಕೆಯಾಗುತ್ತದೆ ಎನ್ನುವುದು ಮೊದಲನೆಯದ್ದು. ಈ ಸಸ್ಯದಿಂದ ಬಂಗಾರ ತಯಾರಿಸಬಹುದು ಎಂಬ ಕಟ್ಟುಕಥೆಗಳನ್ನು ನಂಬಿ ಕೆಲವು ನಡೆಸುವ ವಿಪರೀತ ಪ್ರಯೋಗಗಳು ಇನ್ನೊಂದು ಕಾರಣ! ತನ್ನದಲ್ಲದ ತಪ್ಪಿಗೆ ಈ ಸಸ್ಯ ಅಳಿವಿನಂಚಿಗೆ ತಲುಪಿರುವುದು ವಿಷಾದದ ಸಂಗತಿ.